ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಾರ್ಯದರ್ಶಿ ನೇಮಕ

510 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ರಾಜ್ಯ ಸರ್ಕಾರದಿಂದ ಅನುದಾನವನ್ನೇನಾದರೂ ನೀಡಲಾಗುತ್ತಿದೆಯೇ?*

ಆ) *ಹಾಗಿದ್ದಲ್ಲಿ, ಕಳೆದ ಐದು (5) ವರ್ಷಗಳಿಂದ ನೀಡಿರುವ ಅನುದಾನದ ಮೊತ್ತವೆಷ್ಟು? (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು)*

ಇ) *ಚಿತ್ರಕಲಾ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರುವವರನ್ನು ಯಾವ ರೀತಿ ನೇಮಕ ಮಾಡಲಾಗಿದೆ.*

ಈ) *ಸರ್ಕಾರಿ ನಿಯಮಗಳ ಪ್ರಕಾರ ನಿವೃತ್ತಿಯ ವಯೋಮಿತಿಯನ್ನು ಮೀರಿದ್ದರೂ ಸಹ ಇವರನ್ನೇ ಕಾರ್ಯದರ್ಶಿಯನ್ನಾಗಿ ಮುಂದುವರೆಸಿರುವ ಔಚಿತ್ಯವೇನು?*

ಉ) *ಸಾರ್ವಜನಿಕವಾಗಿ ಇವರ ಮೇಲೆ ಹಲವಾರು ಭ್ರಷ್ಟಚಾರದ ಆರೋಪಗಳಿರುವುದರಿಂದ ಇವರನ್ನು ತೆಗೆದುಹಾಕಿ ಇವರ ಜಾಗದಲ್ಲಿ ಸರ್ಕಾರಿ ಅಧಿಕಾರಿಯೊಬ್ಬರನ್ನು ನೇಮಿಸಲಾಗುವುದೆ?*

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಚಿತ್ರಕಲಾ ಪರಿಷತ್ತಿನ ಲಲಿತಾಕಲಾ ಕಾಲೇಜಿಗೆ ಅಡ್‌ಹಾಕ್ ಅನುದಾನ ನೀಡಲಾಗುತ್ತಿದೆ.

ಆ) ವಿವರಗಳು ಈ ಕೆಳಕಂಡಂತಿವೆ:

ವರ್ಷ		ಲಕ್ಷ ರೂ.ಗಳಲ್ಲಿ
90-91	ಕಟ್ಟಡ ಅನುದಾನ	10.00
91-92	ಅಡ್ ಹಾಕ್ ಅನುದಾನ	01.31
92-93	-ಅದೇ-	08.20
93-94	-ಅದೇ-	07.00
94-95	-ಅದೇ-	12.50
95-96	-ಅದೇ-	06.00

ಇ) ಗೌರವ ಕಾರ್ಯದರ್ಶಿಯನ್ನು ಚುನಾಯಿಸಲಾಗುತ್ತದೆ.

ಈ) ಇದು ಗೌರವಯುತ ಹುದ್ದೆಯಾದುದರಿಂದ ಅನ್ವಯಿಸುವುದಿಲ್ಲ.

ಉ) ಆರೋಪಗಳಾವೂ ಬಂದಿಲ್ಲ.

ಸಂಜಯಗಾಂಧಿ ಆಸ್ಪತ್ರೆಯ ನಿರ್ದೇಶಕರ ಕಾರ್ಯ ವೈಖರಿ

470 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸಂಜಯಗಾಂಧಿ ಆಸ್ಪತ್ರೆಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವವರಾರು?*

ಆ) *ಈ ನಿರ್ದೇಶಕರನ್ನು ಸೇವಾ ನಿಯಮಗಳಿಗೆ ವಿರುದ್ಧವಾಗಿ 5 ವರ್ಷಗಳ ಅವಧಿಗೆ 5 ವರ್ಷಗಳ ಅವಧಿಗೆ ಒಪ್ಪಂದ ಆಧಾರದ ಮೇಲೆ ನೇಮಕ ಮಾಡಿರುವುದು ನಿಜವಲ್ಲವೆ?*